ಕಟ್ಟಡ ನಿರ್ಮಾಣವನ್ನು ನಿಲ್ಲಿಸಲು ಸರ್ಕಾರಕ್ಕೆ ಮನಸ್ಸಿಲ್ಲ. ಆದಕಾರಣ, ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಭಾರತೀಯ ಜತನಾ ಪಕ್ಷದ ಮಾನ್ಯ ಸದಸ್ಯರುಗಳು ಪಕ್ಷದ ಉಪನಾಯಕರಾದ ಶ್ರೀ ಡಿ.ವಿ.ಸದಾನಂದಗೌಡರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು: ಸರ್ಕಾರದವರು ಸದನದ ಸಮಿತಿ ರಚಿಸಲು ಒಪ್ಪಿಕೊಂಡಿರುವುದರಿಂದ ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತಾ, ಸದನದವನ್ನು ಸೋಮವಾರಕ್ಕೆ ಮುಂದೂಡುತ್ತಿದ್ದೇನೆ.

(ಸದನವು ರಾತ್ರಿ 7 ಗಂಟೆ 31 ನಿಮಿಷಕ್ಕೆ ಮೂದೂಡಲ್ಪಟ್ಟ ಪುನ: ಸೋಮವಾರ 29ನೇ ಜುಲೈ 2002ರಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ - I

ಸೋಮವಾರಪೇಟೆ ಆಲೂರು ಸಿದ್ದಾಪುರ ಏತ ನೀರಾವರಿ ಯೋಜನೆ

1358 (1692) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ತಾಲ್ಲೂಕು ಆಲೂರು ಸಿದ್ದಾಪುರ ಏತ ನೀರಾವರಿ ಯೋಜನೆಯ ವಿವರ ನೀಡುವುದು ಕಾವೇರಿ ಹಾಗೂ ಹಾರಂಗಿ ನದಿಗಳು ಹುಟ್ಟಿದರೂ ಅತಿ ಕಡಿಮೆ 1797 ಹೆಕ್ಟೇರ್ ಮಾತ್ರ ನೀರಾವರಿ ಪ್ರಯೋಜನ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಸೋಮವಾರಪೇಟೆ ತಾಲ್ಲೂಕಿನ ಬಾಣಾವರ, ಗಣಗೂರು, ಹೋಣಿಮರೂರು, ಮಾಲಂಬಿ, ಕಂತೆ ಬಸವನಹಳ್ಳಿ, ಚಿಕ್ಕಹಣಗಾಲು, ದೊಡ್ಡಹಣಗಾಲು ಹಾಗೂ ಆಲೂರು ಸಿದ್ದಾಪುರ ಗ್ರಾಮಗಳು ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿದ್ದು ಜಿಲ್ಲಾ ಉಸ್ತುವಾರಿ ಸಚಿವರ ಹಾಗೂ ಹಿಂದಿನ ನೀರಾವರಿ ಸಚಿವರ ದಿ:28-10-96ರ ಕೋರಿಕೆಯಂತೆ ಈ ಗ್ರಾಮಗಳಿಗೆ ಹಾರಂಗಿ ಜಲಾಶಯದ ಎಡದಂಡೆ ಕಾಲುವೆಯಿಂದ ನೀರಾವರಿಗೊಳಪಡಿಸಲು ಪ್ರಸ್ತಾವನೆಯನ್ನು ಕಾರ್ಯಪಾಲಕ ಅಭಿಯಂತರರು ಹಾರಂಗಿ ಅಣೆಕಟ್ಟೆ ವಿಭಾಗ ಹುಲುಗುಂದ, ಕೊಡಗು ಇವರು ಪ್ರಸ್ತಾವನೆ ಕಳುಹಿಸಿರುವುದು ನಿಜವೆ;

ಇ) ಈ ಯೋಜನೆಯ ಬಿ.ಸಿ.ರೇಷಿಯೋ 1.21 ಆಗಿದ್ದು ಈ ಯೋಜನೆಯನ್ನು ಅನುಷ್ಠಾನಗೊಳಿಸಬಹುದಾಗಿದೆ ಎಂದು ಈ ಯೋಜನೆಗೆ ಸುಮಾರು 2950 ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದು ಪ್ರಸ್ತಾವನೆ ಸಲ್ಲಿಸಿದ್ದರೂ ಈ ಪ್ರಸ್ತಾವನೆಯನ್ನು ಸರ್ಕಾರ ಈವರೆಗೆ ಅನುಮೋದಿಸದೇ ಇರಲು ಕಾರಣವೇನು;

ಈ) ಹಾಗಿದ್ದರೂ ಈ ಯೋಜನೆಯನ್ನು ಯಾವಾಗ ಮಂಜೂರು ಮಾಡಲಾಗುತ್ತದೆ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಆಲೂರು ಸಿದ್ದಾಪುರ ಏತ ನೀರಾವರಿ ಯೋಜನೆಯ ಪ್ರಾಥಮಿಕ ಯೋಜನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ವಿವರವಾದ ಯೋಜನಾ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ವಿವರವಾದ ವರದಿ ಬಂದ ನಂತರ ವಿವರಗಳನ್ನು ನೀಡಲಾಗುವುದು. ಹಾರಂಗಿ ಜಲಾಶಯ ಯೋಜನೆಯಿಂದ ಸೋಮವಾರಪೇಟೆ ತಾಲ್ಲೂಕಿನಲ್ಲಿ ಈವರೆಗೆ 2792 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಆ) ವಿವರವಾದ ಯೋಜನಾ ವರದಿ ಬಂದ ನಂತರ ವಿವರಣೆ ನೀಡಲಾಗುವುದು.

ಇ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಈ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ರಾಷ್ಟ್ರೀಯ ಕೃಷಿ ವಿಮಾ ಯೋಜನೆ

1359 (1694) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರಪೇಟೆ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಅಡಿ 2002ರ ಮುಂಗಾರು ಹಂಗಾಮಿನಲ್ಲಿ ಸೋಮವಾರಪೇಟೆ ತಾಲ್ಲೂಕಿನಲ್ಲಿ ಯಾವ ಯಾವ ಬೆಳೆಗಳನ್ನು ಘೋಷಿಸಿಲಾಗಿದೆ (ಗ್ರಾಮವಾರು ವಿವವ ನೀಡುವುದು):

ಆ) ಪ್ರತಿ ಬೆಳೆಗೆ ವಿಮೆ ಮಾಡಿದ ಕೃಷಿಕರ (ಲೋನಿ ಫಾರ್ಮರ್ಸ್ ಹಾಗೂ ನಾನ್ಲೋನಿ ಫಾರ್ಮರ್ಸ್) ಸಂಖ್ಯೆ ಎಷ್ಟು? ವಿಮೆ ಮಾಡಿದ ಕೃಷಿ ಜಮೀನಿನ ವಿಸ್ತೀರ್ಣ ಎಷ್ಟು? ಒಟ್ಟು ಎಷ್ಟು ಮೊತ್ತಕ್ಕೆ ವಿಮೆ ಮಾಡಲಾಗಿದೆ? ಪ್ರೀಮಿಯಂ ಮೊತ್ತ ಎಷ್ಟು (ಗ್ರಾಮವಾರು ವಿವರ ನೀಡುವುದು):

ಇ) ಸೋಮವಾರಪೇಟೆ ತಾಲ್ಲೂಕಿನಲ್ಲಿ ಈವರೆಗೆ ಎಷ್ಟು ಕ್ಲೈಮ್ ಬಂದಿದೆ? ಎಷ್ಟು ಕ್ಲೈಮ್ ಇತ್ಯರ್ಥ ಮಾಡಲಾಗಿದೆ? ಎಷ್ಟು ವಿಮಾ ಮೊತ್ತ ನೀಡಲಾಗಿದೆ? ಗ್ರಾಮವಾರು ವಿವರ ನೀಡುವುದು?

ಶ್ರೀ ವಿ.ಎಸ್.ಕೌಜಲಗಿ (ಕೃಷಿ ಸಚಿವರು):

ಅ) 2002ರ ಮುಂಗಾರು ಹಂಗಾಮಿನಲ್ಲಿ ಸೋಮವಾರಪೇಟೆ ತಾಲ್ಲೂಕಿನಲ್ಲಿ ಘೋಷಿಸಿರುವ ಬೆಳೆಗಳು, ಬತ್ತ (ನೀರಾವರಿ) ಕುಶಾಲನಗರ ಹೋಬಳಿ ಮತ್ತು ಭತ್ತ (ಮಳೆ ಆಶ್ರಿತ)ಕ್ಕೆ ಕೊಡ್ಲಿಪೇಟೆ, ಶನಿವಾರಸಂತೆ, ಶಾಂತಹಳ್ಳಿ, ಸೋಮವಾರಪೇಟೆ ಮತ್ತು ಶುಂಠಿಕೊಪ್ಪ ಹೋಬಳಿಗಳು. ಯೋಜನೆಯಡಿಯಲ್ಲಿ ಗ್ರಾಮಗಳನ್ನು ಘಟಕವನ್ನಾಗಿ ಪರಿಗಣಿಸಿರುವುದಿಲ್ಲವಾದುದರಿಂದ ಗ್ರಾಮವಾರು ವಿವರ ಸಾಧ್ಯವಿರುವುದಿಲ್ಲ.

ಆ) ಮುಂಗಾರು 2002ರಲ್ಲಿ ವಿಮೆ ಮಾಡಿಸಿದ ರೈತರ ವಿವರಗಳು 31 ಜುಲೈ ನಂತರ ಲಭ್ಯವಾಗುವುದರಿಂದ ಈ ಹಂತದಲ್ಲಿ ಮಾಹಿತಿ ಲಭ್ಯವಿಲ್ಲ.

ಇ) ಸೋಮವಾರಪೇಟೆ ತಾಲ್ಲೂಕಿನಲ್ಲಿ ಇದುವರೆವಿಗೂ ಯಾವುದೇ ಬೆಳೆಗೂ ವಿಮಾ ನಷ್ಟ ಪರಿಹಾರ (ಕ್ಲೈಮ್) ನೀಡಿರುವುದಿಲ್ಲ.

ನದಿ ಮತ್ತು ಹಳ್ಳಗಳಲ್ಲಿ ನೀರು ಬಳಕೆ ಬಗ್ಗೆ ರೈತರ ನೀರೆತ್ತುವ ಪರವಾನಗಿ ವಿಳಂಬವಾದ ಬಗ್ಗೆ

1361 (1709) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನದಿ ಮತ್ತು ಹಳ್ಳಗಳಲ್ಲಿ ಹರಿಯುವ ನೀರು ಬಳಕೆ ಬಗ್ಗೆ ರೈತರು ನೀರುತ್ತವ ಪಂಪ್ ಹಾಕಲು, ನೀರಾವರಿ ಇಲಾಖೆಯ ಪರವಾನಗಿ ಪಡೆಯುವುದು ಕಡ್ಡಾಯವೆ: ಹಾಗೆ ಪಡೆಯುವ ಪರವಾನಗಿಯ ಅವಧಿ ಎಷ್ಟು;

ಆ) ತೀರ್ಥಹಳ್ಳಿ ತಾಲ್ಲೂಕಿನಿಂದ ಈ ರೀತಿ ಪರವಾನಗಿ ಅಪೇಕ್ಷಿಸಿ ಇಲಾಖೆಗೆ ಬಂದ